**<u>ದಿನಾಂಕ 23.06.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1 ರಿಂದ 5, 7, 8, 10, 15 ರಿಂದ 17, 19, 20 ಪರ ಶ್ರೀ ಎಂ ಆರ್ ಎಸ್ ವಕೀಲರಿಂದಃ</u>**

ನಿಪಿ1 ಕರಾರು ಪತ್ರದಲ್ಲಿ ಪ್ರತಿವಾದಿ 2 ರವರ ಸಹಿ ಇಲ್ಲ ಎಂದರೆ ಸುಳ್ಳು. ಸಾಕ್ಷಿಯು ಪ್ರತಿವಾದಿ 2 ರವರ ಹೆಬ್ಬೆಟ್ಟಿನ ಗುರತನ್ನು ತೋರಿಸಿರುತ್ತಾರೆ. ಅದಕ್ಕೆ ಪ್ರತಿವಾದಿ 2 ರವರ ಹೆಸರು ನಮೂದು ಮಾಡಿರುವುದಿಲ್ಲ. ಇನ್ನೊಂದು ದಾವಾ ಸಂಖ್ಯೆ 48/2014. ಅದು ಚನ್ನಪಟ್ಟಣ ನ್ಯಾಯಾಲಯದಲ್ಲಿ ಇದೆ. ನ್ಯಾಯಾಲಯದ ಸಂಖ್ಯೆ ಗೊತ್ತಿಲ್ಲ. ಈ ದಾವಾದ ಆಸ್ತಿಯು ಸರ್ವೆ ನಂಬರ್ ನೆನಪಿಲ್ಲ. ಈ ದಾವಾವನ್ನು ಮಂಜುನಾಥ ರವರು ಜಯಮ್ಮ ಮತ್ತು ರಾಜಶೇಖರ್ ರವರ ವಿರುದ್ಧ ಹಾಕಿದ್ದರು. ಈ ದಾವಾ ಮಂಜುನಾಥ ಪರವಾಗಿ ಆಗಿದೆ. ಈ ದಾವಾವನ್ನು ಕರಾರು ಸಂಬಂಧ ಹಾಕಿರುತ್ತಾರೆ. ಮಂಜುನಾಥ ರವರು ಡಿಕ್ರಿ ಪ್ರಕಾರ ಮಾಡಿಕೊಂಡಿರುವುದಿಲ್ಲ ಯಾಕೆ ಮಾಡಿಕೊಂಡಿಲ್ಲ ಎಂಬುದು ನನಗೆ ಗೊತ್ತಿಲ್ಲ. ನಾನು ಪ್ರತಿವಾದಿಗಳಿಗೆ ಕರಾರು ಆದ 11 ತಿಂಗಳೊಳಗೆ ನೋಟೀಸ್ ಕೊಟ್ಟಿಲ್ಲ. ಕರಾರು ಆದ 3 ವರ್ಷದವರೆಗೆ ನಾನು ಪ್ರತಿವಾದಿಗಳಿಗೆ ನೋಟೀಸ್ ಕೊಟ್ಟಿಲ್ಲ. ಷರಾವನ್ನು ನಿಪಿ-1 ರ ಕಡೆಭಾಗದಲ್ಲಿ ಬರೆಯಬಹುದೀತು ಅಂದರೆ ಸಾಕ್ಷಿಯು ಪ್ರತ್ಯೇಕ ಹಾಳೆಯಲ್ಲಿ ಬರೆಯಿಸಿಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ನಿಪಿ-2 ರ ಷರಾಕ್ಕೆ ಕಾನೂನು ಮಾನ್ಯತೆ ಎಂದರೆ ಸುಳ್ಳು. ನಿಪಿ-2 ರ ಷರಾಕ್ಕೆ ಎಲ್ಲಾ ಪ್ರತಿವಾದಿಗಳ ಸಹಿ ಇಲ್ಲ ಎಂದರೆ ನಿಜ. ನಿಪಿ-2 ರ ಷರಾಕ್ಕೆಪ್ರತಿವಾದಿ 9 ರಿಂದ 14 ರವರು ಸಹಿ ಮಾಡಿರುತ್ತಾರೆ. ನಿಪಿ-2 ರ ಷರಾಕ್ಕೆ ಬೇರೆ ಪ್ರತಿವಾದಿಗಳ ಸಹಿ ಮಾಡಿಸಲು ಅವರು ತಯಾರಿರಲು ಇಲ್ಲ ಎಂದು ಹೇಳುತ್ತಾರೆ. ನಿಪಿ-2 ರ ಷರಾವನ್ನು ದಿನಾಂಕಃ 15.04.2019 ಬೆಳಗ್ಗೆ 11-29 ಗಂಟೆಗೆ ಬಾಂಡ್ ಪೇಪರ್ ಅನ್ನು ಪಡೆದಿದ್ದಾರೆ ಎಂದರೆ ನಿಜ. ಈ ಪತ್ರವನ್ನು ಅದೇ ದಿನ ಬರೆಯಿಸಿದ್ದೇವೆ. ನಿಪಿ-2 ರ ಷರಾವನ್ನು ದಿನಾಂಕಃ 12.04.2019 ರಂದು ಬರೆದಿದ್ದಾರೆ ಎಂದು ಸಾಕ್ಷಿಯು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ಬೆರಳಚ್ಚಿನ ತಪ್ಪಾಗಿ

ಎಂದು ಹೇಳುತ್ತಾರೆ. ಈ ವಿವಾರಣೆ ಬಗ್ಗೆ ವಾದ ಪತ್ರದಲ್ಲಿ ತಿಳಿಸಿಲ್ಲ ಈ ತಪ್ಪಿನ ಅರಿವು ಈಗಾಲೇ ಆಗುತ್ತಿದೆ. ನಿಪಿ-2 ರ ಷರಾಕ್ಕೆ ಪ್ರತಿವಾದಿಗಳು 7, 9, 10, 12, 13, 14, 15, 19, 20 ರವರ ಒಪ್ಪಿಗೆ ಇಲ್ಲ ಎಂದರೆ ಸುಳ್ಳು. ನಿಪಿ-2 ರ ಷರಾಕ್ಕೆ ಉಳಿದ ಪ್ರತಿವಾದಿಗಳ ಒಪ್ಪಿಗೆ ಪಡಿದಿಲ್ಲ ಎಂದರೆ ಸಾಕ್ಷಿಯು ಅವರಿಗೆ ತಿಳಿಸಿದ್ದರು ಬಂದಿಲ್ಲ ಎಂದು ಹೇಳುತ್ತಾರೆ.

ಪ್ರತಿವಾದಿಗಳು 18 ರವರು ತೀರಿಕೊಂಡಿದ್ದು ನೆನಪಿಲ್ಲ. ನಾನು ನಿಗದಿತ ಸಮಯದಲ್ಲಿ ಕ್ರಯ ಮಾಡಿಸಿಕೊಳ್ಳಲು ಪ್ರಯತ್ನ ಮಾಡಿಲ್ಲ ಎಂದರೆ ಸುಳ್ಳು ನಾನು ಸರಿಯಾದ ಸಮಯದಲ್ಲಿ ಕ್ರಯ ಮಾಡಿಸಿಕೊಳ್ಳದೇ ಇರುವುದರಿಂದ ಪ್ರತಿವಾದಿಗಳಿಗೆ ತೊಂದರೆಯಾಗಿದೆ ಎಂದರೆ ಸುಳ್ಳು. ಆದ್ದರಿಂದ ಪ್ರತಿವಾದಿಗಳು ನನಗೆ ಮುಂಗಡ ಹಣವನ್ನು ಕೊಡಲು ಬಾಧ್ಯಸ್ತರಲ್ಲ ಎಂದರೆ ಸಾಕ್ಷಿಯು ಕ್ರಯ ಮಾಡಿಸಿಕೊಳ್ಳಲು ತಯಾರಿದ್ದೇನೆ ಎಂದು ಹೇಳುತ್ತಾರೆ. ನಿಪಿ-2 ರ ಷರಾವನ್ನು ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸುಳ್ಳು. ಪ್ರತಿವಾದಿಗಳು ಕ್ರಯ ಮಾಡಿಕೊಡಲು ಬಾಧ್ಯಸ್ಥರಲ್ಲ ಎಂದರೆ ಸುಳ್ಳು. ದಾವಾಕ್ಕೆ ಕಾಲದ ಮಿತಿ ಇಲ್ಲ ಎಂದರೆ ಸುಳ್ಳು.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.